ನನಗೆ ಕೂಲಿ ಕೊಡುವುದಾದರೆ ನಾನು ಈ ಕೆಲಸ ಮಾಡುವುದಿಲ್ಲ!' ಎಂದ.

ಮಾಸ್ತ್ರು ಅವಾಕ್ಕಾದರು. 'ಏನು ಹೇಳುತ್ತಿದ್ದೀರಿ ನೀವು?' ಎಂದು ಹುಬ್ಬುಗಂಟಿಕ್ಕಿ 'ನೀವು ಹಾಲು ಕೊಂಡುಹೋಗುವುದಕ್ಕೆ ಆಕ್ಷೇಪ ಇಲ್ಲ. ಆದರೆ ನೀವು ಕೂಲಿ ತೆಗೆದುಕೊಳ್ಳದಿದ್ದರೆ ನಾವು ನಿಮ್ಮಲ್ಲಿ ಹಾಲು ಕೊಂಡೊಯ್ಯಲು ಕೊಡುವುದಿಲ್ಲ' ಎಂದರು.

ಅಷ್ಟರಲ್ಲಿ ಅಬೂಬಕ್ಕರ್ ಹಾಲಿನ ಕ್ಯಾನನ್ನು ಹಿಡಿದುಕೊಂಡು ತಾನು ಏರಿ ಬಂದ ಸೈಕಲ್ಲಿನಾಚೆ ಬಂದಾಗಿತ್ತು. 'ಬೇಡ' ಎನ್ನಲು ಮಾಸ್ತ್ರಿಗೂ ನೀಲಮ್ಮನಿಗೂ ಮನಸ್ಸು ಬರಲಿಲ್ಲ. ಇಬ್ಬರೂ ಪರಸ್ಪರ ಮುಖ ನೋಡಿಕೊಂಡು ಸಾಹೇಬನು ಸೈಕಲ್ ಏರಿದ್ದನ್ನು ನೋಡಿದರು. ಆ ಮೇಲೆ ಮಾಸ್ತ್ರು ನೀಲಮ್ಮನಲ್ಲಿ 'ಈ ಸಾಬಿಗೆ ಎಂಥ ಪ್ರೀತಿಯೋ, ಆ ದೇವರಿಗೇ ಗೊತ್ತು! ಹತ್ತು ಹದಿನೈದು ವರುಷಗಳ ಹಿಂದೆ ಇವನ ಮಗ ಸಾದಿಕ್, - ಈಗ ದುಬೈನಲ್ಲಿ ಇದ್ದಾನಲ್ಲ - ಅವನನ್ನು ದರದರ ಎಳೆದುಕೊಂಡು ನಮ್ಮ ಮನೆ ಬಾಗಿಲಿಗೆ ಬಂದದ್ದು ನೆನಪುಂಟಾ ನಿನಗೆ?' ಎಂದು ಪ್ರಶ್ನಿಸಿದರು.

ನೀಲಮ್ಮನ ಕಣ್ಣಿನಲ್ಲಿ ಆ ದೃಶ್ಯ ಇದಿರಾಯಿತು. ಆ ದಿನ ಇದೇ ಅಬೂಬಕ್ಕರ್ ತಮ್ಮ ಮಗ ಸಾದಿಕ್‌ನ ಬೆನ್ನಿಗೆ ಒಂದು ಕೋಲಿನಲ್ಲಿ ಬಾರಿಸುತ್ತಾ ಮಾಸ್ತ್ರ ಅಂಗಳಕ್ಕೆ ಬಂದಿದ್ದ. ಮಾಸ್ತ್ರು ಗಾಬರಿಯಲ್ಲಿ 'ಯಾಕೆ ನಿಮ್ಮ ಮಗನಿಗೆ ಹೀಗೆ ಹೊಡೆಯುತ್ತಿದ್ದೀರಿ? ಇಲ್ಲಿಗೆ ಯಾಕೆ ಅವನನ್ನು ಕರೆತಂದಿರಿ?' ಎಂದು ಆತಂಕದಿಂದ ಪ್ರಶ್ನಿಸಿದ್ದರು.

ಆಗ ಅಬೂಬಕ್ಕರ್ 'ನೋಡಿ ಮಾಸ್ತ್ರೇ, ಈ ಮಗ ಎಂಥ ಹಲ್ಕಾ ಕೆಲಸ ಮಾಡಿದ್ದಾನೆ ಗೊತ್ತಾ? ಅದರಿಂದಾಗಿ ನಾನು ಈಗ ತಲೆ ತಗ್ಗಿಸುವ ಹಾಗಾಗಿದೆ' ಎನ್ನುತ್ತಾ 'ಇಂವ ಏನು ಮಾಡಿದ ಅಂದರೆ ನಮ್ಮ ಮನೆ ಹಿಂದಿನ ಶೆಟ್ಟರ ತೋಟದಲ್ಲಿ ಒಣಗಿ ತನ್ನಿಂತಾನೆ ಬಿದ್ದಿದ್ದ ಎರಡು ತೆಂಗಿನ ಕಾಯಿಯನ್ನು ಇಂದು ಬೆಳಗ್ಗೆ ಕದ್ದು ತಂದಿದ್ದ. 'ಯಾಕೆ ಕದ್ದು ತಂದದ್ದು?' ಎಂದು ಬೆದರಿಸಿದೆ. ಬಾಯಿ ಬಿಡಲಿಲ್ಲ. ಎರಡು ಬಾರಿಸಿದ ಮೇಲೆ ಹೇಳಿದ 'ನಾಳೆ ಸೀತಾಪುರ ಜಾತ್ರೆಯಲ್ವಾ? ಅಲ್ಲಿ ಸಂತೆಯಲ್ಲಿ ಐಸ್ ಕ್ಯಾಂಡಿ ಮತ್ತು ಬಲೂನು ತಗೊಳ್ಳಲು ನನಗೆ ದುಡ್ಡು ಬೇಕಿತ್ತು. ನಿಮ್ಮನ್ನು ಕೇಳಿದರೆ ನೀವು ಇಲ್ಲ ಎನ್ನುತ್ತೀರಿ. ಅದಕ್ಕೆ ಕದ್ದೆ' ಎಂದ. ನನಗೆ ಇವನು ಕದ್ದುಕೊಂಡ ನೋವಿನಷ್ಟೇ ನನ್ನ ಮಕ್ಕಳಿಗೆ ಸಂತೆಯ ಖರ್ಚಿಗೆ ನಾನು ಒಂದೊಂದು ರೂಪಾಯಿ ಕೊಡಲು ಸಮರ್ಥನಲ್ಲ ಎಂಬ ನೋವೂ ಕಾಡತೊಡಗಿತು. ನನ್ನ ಮೇಲಿನ ಆ ಸಿಟ್ಟಿನಲ್ಲೇ ನಾನು ಅವನಿಗೆ ಬಾರಿಸಲು ಮುಂದಾದೆ. ತಕ್ಷಣ ಇದರಲ್ಲಿ ನನ್ನ ತಪ್ಪೂ ಇದೆ ಎಂದು ನಿಮ್ಮಲ್ಲಿ ನ್ಯಾಯ ಕೇಳಲು ಮತ್ತು ಇವನಿಗೆ ಬುದ್ಧಿ ಹೇಳಿಸಲು ಕರೆತಂದೆ. ನೀವು ಮಾಸ್ತ್ರು ಮಾತ್ರವಲ್ಲ. ನನ್ನ ಪಾಲಿನ ಮೌಲಿಯೂ ಹೌದು' ಎಂದ. ಹಾಗೆ



ಹೇಳುವಾಗ ಅವನ ಕಣ್ಣು ಹನಿಗೂಡಿತ್ತು. ಆದರೂ ಆತ ಗದ್ಗದಿತನಾಗಿ 'ನನಗೆ ಏಳು ಜನ ಮಕ್ಕಳು ಸ್ವಾಮಿ. ಅಷ್ಟೂ ಮಕ್ಕಳಿಗೆ ಊರ ಜಾತ್ರೆಗಾಗಿ ತಲಾ ಒಂದೊಂದು ರೂಪಾಯಿಯನ್ನು ಕೊಡಲಾರದಷ್ಟು ದುರದೃಷ್ಟಶಾಲಿ ನಾನು' ಎಂದು ಹೇಳುತ್ತಾ 'ಆ ಏಳು ರೂಪಾಯಿಗಳಿಂದ ನಮ್ಮ ಒಂಬತ್ತು ಜನರ ಹೊಟ್ಟೆ ಎರಡು ದಿನ ತುಂಬುವುದಿಲ್ಲವೇ? ಜಾತ್ರೆಯ ಗಮ್ಮತಿಗಾಗಿ ಅದನ್ನು ಹೇಗೆ ನಾನು ಕಳೆದುಕೊಳ್ಳಲಿ?' ಎಂದ.

ದುಗ್ಗೋಜಿ ಮಾಸ್ತ್ರು ಮಾತನಾಡಲಿಲ್ಲ. ನಿಧಾನವಾಗಿ ಎದ್ದು ನಿಂತು ಅಬೂಬಕ್ಕರ್ ಬಳಿ ಹೋಗಿ ಆ ಕೋಲನ್ನು